ಅನಂತರ ತಿಳಿದು ಬಂದ ವಿಷಯವೆಂದರೆ ಆ ಹುಡುಗಿಗೆ ಐ.ಪಿ.ಎಸ್ ಗಂಡು ಸಿಕ್ಕಿದ ಕಾರಣ ತೇಜಸ್‌ನನ್ನು ಬಿಟ್ಟಿಬಿಟ್ಟಿದ್ದಳು.

ತೇಜಸ್‌ನ ಇನ್ನೊಂದು ಪ್ರೇಮ ಕಥೆ ಅಮೆರಿಕಗೆ ಹೋಗಿ ಅಲ್ಲೆಲ್ಲ ಪ್ರಚಾರವಾದ ಮೇಲೆಯೆ ಅದು ನಮಗೆ ತಿಳಿದು ಬಂದಿದ್ದು. ತೇಜಸ್ ಕೂಡ ದಮಯಂತಿಯ ರೀತಿಯಲ್ಲೇ ಮೊದಲಿಗೆ ಒಂದು ಉದ್ದವಾದ ಪತ್ರವನ್ನು ನಮಗೆ ಬರೆದಿದ್ದ. ಅಣ್ಣ ತಂಗಿ ಇಬ್ಬರೂ ಮಾತನಾಡಿಕೊಂಡ ಮೇಲೆಯೇ ತೇಜಸ್ ಕೂಡ ನಮಗೆ ಈ ಪತ್ರ ಬರೆದಿರಬಹುದು ಎನಿಸುತ್ತದೆ. ಇಬ್ಬರೂ ಪೈಪೋಟಿಗೆ ಬಿದ್ದಂತೆ ನಮ್ಮ ಚಿತ್ತವನ್ನು ಕೆಡಿಸಿದ್ದರು. ಆದರೂ ನಮಗೆ ಇದರಿಂದ ಒಂದು ರೀತಿಯಲ್ಲಿ ಸಮಾಧಾನವೇ ಆಗಿತ್ತು. ಯಾಕೆಂದರೆ ಈ ಕಾಲದಲ್ಲಿ ಅವರವರ ಜೋಡಿಗಳನ್ನು ಅವರೇ ಹುಡುಕಿಕೊಳ್ಳುವುದು ವಾಸಿ.

ಕೆಲವು ದಿನಗಳಾದ ಮೇಲೆ ತೇಜಸ್ ಪ್ರೀತಿಸಿದ್ದ ಅದಿತಿಯ ತಂದೆ ತಾಯಿ ಫೋನ್‌ನಲ್ಲಿ ನಮ್ಮ ಜೊತೆಗೆ ಮಾತನಾಡುತ್ತ, ನೇರವಾಗಿ, 'ಪ್ರೊಫೆಸರ್ ಕೃಷ್ಣಾಜಿ, ನಿಮ್ಮ ಹುಡುಗ ನಮಗೆ ತುಂಬಾ ಹಿಡಿಸಿದ್ದಾನೆ. ನಮ್ಮ ಮಗಳಿಗೂ ನಿಮ್ಮ ಹುಡುಗ ತುಂಬಾ ಇಷ್ಟ ಆಗಿದ್ದಾನೆ. ನೀವೂ ಈಗಾಗಲೇ ಮದುವೆಗೆ ಒಪ್ಪಿಕೊಂಡಿದ್ದೀರಿ ಅಂತ ತೇಜಸ್ ಹೇಳಿದ್ದಾರೆ. ನೀವು ಏನೂ ತಿಳಿದುಕೊಳ್ಳುವುದಿಲ್ಲ ಅಂದರೆ ಇಡೀ ಮದುವೆಯ ಖರ್ಚನ್ನು ನಾವೇ ಬರಿಸುತ್ತೇವೆ. ನೀವು ನಮ್ಮ ಅದಿತಿಯನ್ನು ನೋಡುವುದಾದರೆ ಅಮೆರಿಕದಿಂದ ದೆಹಲಿಗೆ ಕರೆಸುತ್ತೇವೆ. ನೀವೆಲ್ಲರೂ ದೆಹಲಿಗೆ ಬಂದು ನೋಡಬಹುದು. ಆಗ ನಮ್ಮ ಮನೆ, ನಮ್ಮ ಕುಟುಂಬದವರನ್ನು ನೀವು ನೋಡಿದಂತಾಗುತ್ತದೆ. ನಾನು, ನಿಮಗೆ ಎಲ್ಲವನ್ನೂ ಹೇಳಿಬಿಟ್ಟಿದ್ದೇನೆ. ಈಗ ನಿಮ್ಮ ಸರದಿ' ಎಂದು ಎಲ್ಲವನ್ನು ಅದಿತಿ ಅಪ್ಪ ಹೇಳಿ ಮುಗಿಸಿದ್ದರು. ಅದಾದ ಮೇಲೆ ನಾವು ಹದಿನೈದು ಜನ ದೊಡ್ಡವರು ಮತ್ತು ಐದು ಮಕ್ಕಳು ಸೇರಿ ದೆಹಲಿಗೆ ಹೋಗಿ ಅದಿತಿ, ಅವರ ಕುಟುಂಬ ಮತ್ತು ಸಂಬಂಧಿಗಳನ್ನು ನೋಡಿಕೊಂಡು ಬಂದಿದ್ದೆವು.

***

ಅಲ್ಲಿಗೆ ನಾವೀಗ ದಮಯಂತಿ ಮತ್ತು ತೇಜಸ್ ಇಬ್ಬರ ಮದುವೆಗಳನ್ನು ಮಾಡಬೇಕಾದ ಪ್ರಸಂಗ ಒದಗಿಬಂದಿತ್ತು. ಎರಡೂ ಮದುವೆಗಳನ್ನು ಒಟ್ಟಾಗಿ ಮಾಡಲು ನಿರ್ಧಾರ ಮಾಡಿಕೊಂಡು ಸಾಕಷ್ಟು ಹಣವನ್ನು ಎರಡೂ ಮದುವೆಗಳ ಖರ್ಚಿಗಾಗಿ ಹೊಂದಿಸಿಕೊಳ್ಳಲು ಆರಂಭಿಸಿದ್ದೆವು. ಎರಡು ಮದುವೆಗಳಿಗೆಂದು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದ ಹಣವನ್ನೆಲ್ಲ ಲೆಕ್ಕ ಹಾಕಿ ಇಟ್ಟುಕೊಂಡೆ. ದಮಯಂತಿ ಮತ್ತು ತೇಜಸ್ ಇಬ್ಬರಿಗೂ ಫೋನ್ ಮಾಡಿ ವಿಷಯ ತಿಳಿಸಿದೆವು. ದಮಯಂತಿಗೆ, ಅಮೆರಿಕದದ ಜಾನ್ ಮನೆಯಲ್ಲಿ ಮತ್ತು ತೇಜಸ್‌ಗೆ ಅದಿತಿ ಮನೆಯಲ್ಲಿ ಮಾತನಾಡಿ ಮದುವೆ ದಿನಾಂಕಗಳನ್ನು ತಿಳಿಸಿದರೆ, ನಾವು ಎರಡೂ ಮದುವೆಗಳಿಗೆ ಒಟ್ಟಾಗಿ ತಯಾರಿ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದೆವು.

ಅದಿತಿ ತಂದೆ ನಮಗೆ ಫೋನ್ ಮಾಡಿ ದೆಹಲಿಯಿಂದ ಬೆಂಗಳೂರಿಗೆ ಬಂದು ಹೋಗುವ ಮತ್ತು ಬೆಂಗಳೂರಿನ ಹೋಟೆಲಿನಲ್ಲಿ ಉಳಿದುಕೊಳ್ಳುವ ಮತ್ತು ಇತರ ವೆಚ್ಚಗಳನ್ನು ತಾವೇ ವಹಿಸಿಕೊಳ್ಳುವುದಾಗಿ ಹೇಳಿಬಿಟ್ಟರು. ಇನ್ನು ಅಮೆರಿಕದಿಂದ ಬರುವ ಜಾನ್ ಕುಟುಂಬ ಅಮೆರಿಕದಿಂದ ಬೆಂಗಳೂರಿಗೆ ಬರುವ ಮತ್ತು ಹೋಗುವ ವೆಚ್ಚವನ್ನು ಅವರೇ ವಹಿಸಿಕೊಳ್ಳುವುದಾಗಿ ಮೊದಲೇ ತಿಳಿಸಿದ್ದರು. ಅಂತೂ ಮದುವೆಗೆ ಎಲ್ಲ ರೀತಿಯ ತಯಾರಿಗಳನ್ನು ಮಾಡಿಕೊಳ್ಳುತ್ತಿದ್ದೆವು. ನಾನು, ನನ್ನ ಮಾವ ಮಾಡಿದ ಕೆಲಸವೆಂದರೆ ಬೆಂಗಳೂರಿನ ಒಂದು ದೊಡ್ಡ ಹೋಟೆಲಿನಲ್ಲಿದ್ದ ಮದುವೆ ಹಾಲ್ ಜೊತೆಗೆ ಇಪ್ಪತ್ತೈದು ಕೋಣೆಗಳನ್ನು ಎರಡು ದಿನಗಳಿಗಾಗಿ ಬುಕ್ ಮಾಡಿ ಬಂದೆವು. ದಮಯಂತಿಯ ಜೊತೆಗೆ ಹತ್ತಾರು ಸಲ ಫೋನ್‌ನಲ್ಲಿ ಮಾತನಾಡಿ ಚಿನ್ನದ ಆಭರಣಗಳನ್ನು ಮಾಡಲು ಅಂಗಡಿಯಲ್ಲಿ ಆರ್ಡರ್ ಕೊಟ್ಟೆವು. ದಮಯಂತಿ ಬಂದ ಮೇಲೆ ಅವಳಿಗೆ ಇನ್ನೂ ಏನಾದರೂ ಬೇಕಾದರೆ ತೆಗೆದುಕೊಳ್ಳಲಿ ಎಂದು ನಿರ್ಧಾರ ಮಾಡಿಕೊಂಡೆವು. ತೇಜಸ್ ಮಾತ್ರ, ನಾನು ಬೆಂಗಳೂರಿಗೆ ಬಂದ ಮೇಲೆ ಏನಾದರು ಒಡವೆಗಳು ಬೇಕಾದರೆ ಅಲ್ಲೇ ತೆಗೆದುಕೊಳ್ಳುತ್ತೇನೆ. ಸೂಟುಗಳನ್ನು ಅಮೆರಿಕದದಲ್ಲಿ ಹೊಲಿಸಿಕೊಂಡು ಬರುತ್ತೇನೆ ಎಂದು ತಿಳಿಸಿದ್ದ.

ಇನ್ನು ಅದಿತಿಗೆ ಬೇಕಾದ ಆಭರಣಗಳನ್ನು ಅವರ ತಂದೆ ತಾಯಿ ನಾವೇ ಖರೀದಿ ಮಾಡುತ್ತೇವೆ ಎಂದು ತಿಳಿಸಿದ್ದರು. ಜೊತೆಗೆ ನಾವೂ ಕೂಡ ಅವಳಿಗೆ ಕೆಲವು ಆಭರಣಗಳನ್ನು ಆರ್ಡರ್ ಮಾಡಿದೆವು. ಒಟ್ಟಿನಲ್ಲಿ ಇಬ್ಬರ ಮದುವೆಯೂ ಒಂದೇ ಸಲಕ್ಕೆ ನಡೆದು ಹೋಗುತ್ತದೆ ಎಂಬ ಸಂಭ್ರಮದಲ್ಲಿ ನಾವೆಲ್ಲ ತೇಲಾಡುತ್ತಿದ್ದೆವು. ಜೊತೆಗೆ ದಮಯಂತಿಯನ್ನು ಮಾಡಿಕೊಳ್ಳುತ್ತಿರುವ ಹುಡುಗ ಅಮೆರಿಕದ ಹುಡುಗ ಎಂದು ಈಗ ಎಲ್ಲರಿಗೂ ಯಾವುದೇ ಬಿಗುಮಾನ, ರಹಸ್ಯ ಇಟ್ಟುಕೊಳ್ಳದೆ ಹೇಳಿಕೊಳ್ಳುತ್ತಿದ್ದೆವು. ಪ್ರತಿಯೊಂದಕ್ಕೂ ತಮ್ಮನ ಕುಟುಂಬವನ್ನು ಬೆಂಗಳೂರಿಗೆ ಕರೆಸಿಕೊಳ್ಳುತ್ತಿದ್ದೆವು. ನಾನು ಸಾವಿತ್ರಿ ಪ್ರತಿಯೊಂದು ನಿರ್ಧಾರಕ್ಕೂ ನನ್ನ ಅತ್ತೆ ಮಾವನ ಸಲಹೆ ಪಡೆದುಕೊಳ್ಳುತ್ತಿದ್ದೆ. ನನ್ನ ತಂಗಿ ಸರೋಜ ಮತ್ತು ಲೋಕೇಶ್ ಎಲ್ಲಾ ಕೆಲಸಕ್ಕೂ ನನ್ನ ಹಿಂದೆಯೆ ಇರುತ್ತಿದ್ದರು. ಈಗ ಉಳಿದಿರುವುದು ಜೋಡಿ ಮದುವೆಗಳು ನಡೆಯುವುದು ಮಾತ್ರ.

## ಮದುವೆ ಸಂಭ್ರಮದಲ್ಲಿ...

ಬೆಂಗಳೂರಿನ ಒಂದು ಪ್ರಖ್ಯಾತ ಹೋಟೆಲಿನಲ್ಲಿ ಮೂವತ್ತೈದು ಕೋಣೆಗಳಲ್ಲಿ ದೆಹಲಿಯಿಂದ ಬಂದ ಅದಿತಿ ಕುಟುಂಬ ಮತ್ತು ಗೆಳೆಯರು, ಅಮೆರಿಕದಿಂಧ ಬಂದ ಜಾನ್ ಕುಟುಂಬ ಮತ್ತು ಅವರ ಗೆಳೆಯರು ತಂಗಿದ್ದಾರೆ. ಎಲ್ಲೆಲ್ಲೂ ಜನ ಬ್ಯುಸಿಯಾಗಿ ಓಡಾಡುತ್ತಿದ್ದಾರೆ. ಮಧ್ಯೆ ಮಧ್ಯೆ ಮಕ್ಕಳು ದೊಡ್ಡವರ ಕೈಗಳನ್ನು ಹಿಡಿದುಕೊಂಡು ಇಲ್ಲ ಹಿಂದೆಯೇ ಓಡಾಡುತ್ತಿದ್ದಾರೆ. ಹೊಸ ಹೊಸ, ವಿಧ ವಿಧ ಬಣ್ಣಗಳು ಮತ್ತು ವಿನ್ಯಾಸದ ಬಟ್ಟೆಗಳನ್ನು ಧರಿಸಿ ಓಡಾಡುತ್ತಿದ್ದಾರೆ. ಮಹಿಳೆಯರು ಅಲಂಕಾರ ಮಾಡಿಕೊಳ್ಳುತ್ತಿದ್ದಾರೆ. ಅಮೆರಿಕದಿಂದ ಬಂದಿರುವ ಮಹಿಳೆಯರು ಸೀರೆ ಬ್ಲೌಸ್, ಲಂಗ ದಾವಣಿ ಮತ್ತು ಮಹನೀಯರಿಗೆ ಜುಬ್ಬಾ ಪೈಜಾಮ, ಪಂಚೆ ಇತ್ಯಾದಿಗಳನ್ನು ದಮಯಂತಿ ಬಂದಾಗಲೇ ಅವರ ಸೈಜ್‌ಗಳನ್ನು ಅಲ್ಲಿಂದಲೇ ಮೊದಲೇ ತಂದಿದ್ದು ಅವರಿಗೆಲ್ಲ ಹೊಸಹೊಸ ಬಟ್ಟೆಗಳನ್ನು ಬೆಂಗಳೂರಿನಲ್ಲಿ ಖರೀದಿಸಿ, ಕೆಲವನ್ನು ಹೊಲಿಸಿ ಎಲ್ಲರಿಗೂ ಕೊಟ್ಟಿದ್ದಾಳೆ. ಅವರೆಲ್ಲ ಆ ಬಟ್ಟೆಗಳನ್ನು ಧರಿಸಿ ಬಹಳ ಖುಷಿಯಿಂದ ಓಡಾಡುತ್ತಿದ್ದಾರೆ.

ಹೋಟೆಲಿನ ದೊಡ್ಡ ಹಾಲ್‌ನಲ್ಲಿ ಬೆಳಿಗ್ಗೆ 8.00 ಗಂಟೆಯಿಂದ 8.25ರ ಮಧ್ಯೆ ನಡೆಯುವ ಮುಹೂರ್ತದಲ್ಲಿ ಮಾಂಗಲ್ಯ ಧಾರಣೆ ನಡೆಯುತ್ತದೆ. ಈ ಎರಡೂ ಮದುವೆಗಳ ಒಂದು ವಿಶೇಷವೆಂದರೆ ಅದಿತಿ–ತೇಜಸ್ ಮತ್ತು ದಮಯಂತಿ–ಜಾನ್ ಎರಡೂ ಜೋಡಿಗಳ ಮದುವೆಗಳನ್ನು ಐದು ನಿಮಿಷಗಳ ಅಂತರದಲ್ಲಿ ಮಾಡಲು ಗುರು ಹಿರಿಯರು ನಿಶ್ಚಯಿಸಿದ್ದರು. ತೇಜಸ್ ಐದು ನಿಮಿಷ ಮೊದಲು ಹುಟ್ಟಿರುವುದರಿಂದ ಅವನ ಮದುವೆ ಐದು ನಿಮಿಷ ಮೊದಲು ಮತ್ತು ದಮಯಂತಿ ಐದು ನಿಮಿಷಗಳ ನಂತರ ಹುಟ್ಟಿದ್ದ ಕಾರಣ ಐದು ನಿಮಿಷಗಳ ನಂತರ ಅವಳ ಮದುವೆ ನಡೆಯುತ್ತದೆ. ಎರಡೂ ಮದುವೆಗಳು ಸ್ವಸ್ತಿಶ್ರೀ ವಿಜಯನಾಮ ಸಂವತ್ಸರ ವೈಶಾಖ ಮಾಸ ಶುಕ್ಲ ಪಕ್ಷ ದಶಮಿ ತಿಥಿ ಉತ್ತರ, ಶುಭ ಮಿಥುನ ಲಗ್ನದಲ್ಲಿ ನಡೆಯುತ್ತದೆ. ಆಗಲೇ ಡೈನಿಂಗ್ ಹಾಲ್‌ನಲ್ಲಿ ಹಲವು ರೀತಿಯ ತಿಂಡಿಗಳನ್ನು ಜನರು ತಿಂದು, ಟೀ, ಕಾಫಿ ಕುಡಿಯುತ್ತಿದ್ದಾರೆ. ಒಂದು ಕೋಣೆಯಲ್ಲಿ ಇಬ್ಬರು ವಧುಗಳು ಮತ್ತು ಇನ್ನೊಂದು ಕೋಣೆಯಲ್ಲಿ ಇಬ್ಬರು ವರರಿಗೆ ಒಂದೇ ರೀತಿಯ ಮುಹೂರ್ತದ ಬಟ್ಟೆಗಳನ್ನು ಹಾಕಿ ಅಲಂಕಾರ ಮಾಡಲಾಗುತ್ತಿದೆ.

ವಿಶೇಷವಾಗಿ ನಮ್ಮವರು ಜಾನ್‌ನನ್ನು ಬೆಳಿಗ್ಗೆಯೇ ಎಬ್ಬಿಸಿ ಸ್ನಾನ ಮಾಡಿಸಿ ಅವನ ಹಣೆಗೆ ತಿಲಕವಿಟ್ಟು ಪಂಚೆ ಇತರ ಬಟ್ಟೆಗಳನ್ನು ಉಡಿಸುತ್ತ ಶೃಂಗಾರ ಮಾಡುತ್ತಿದ್ದಾರೆ. ಜಾನ್ ಕಡೆಯವರೆಲ್ಲ ಜಾನ್‌ನನ್ನು ಆಶ್ಚರ್ಯವಾಗಿ ನೋಡುತ್ತ ಜಾನ್ ಮತ್ತು ತೇಜಸ್ ಒಬ್ಬರನ್ನೊಬ್ಬರು ನೋಡಿಕೊಂಡು ನಗುತ್ತಿದ್ದಾರೆ. ಇನ್ನೊಂದು ಕೋಣೆಯಲ್ಲಿ ಅದಿತಿ ಮತ್ತು ದಮಯಂತಿಗೆ ಮಹಿಳೆಯರು ಅದೇ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನೂ ವಿಶೇಷವೆಂದರೆ ಇಬ್ಬರಿಗೂ ಒಂದೇ ರೀತಿಯಾದ ಬಟ್ಟೆಗಳನ್ನು ಮತ್ತು ಒಡವೆಗಳನ್ನು ತರಲಾಗಿದೆ. ಅಲ್ಲಿ ಹಸೆಮಣೆಯ ಮುಂದೆ ಕುಳಿತಿರುವ ಜೋಯಿಸರು ಮುಹೂರ್ತಕ್ಕೆ ಬೇಕಾದ ಎಲ್ಲಾ ಸಾಮಾನುಗಳನ್ನು ಮುಂದಿಟ್ಟುಕೊಂಡು ಎಲ್ಲವನ್ನು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅಮೆರಿಕದಿಂದ ಬಂದಿರುವ ಜನರನ್ನು ನೋಡುತ್ತಿರುವ ಹಳ್ಳಿಯ ಜನರು ಬಹಳ ಆಶ್ಚರ್ಯವಾಗಿ ಕಣ್ಣುಗಳನ್ನು ಬಿಟ್ಟುಕೊಂಡು